# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಕ್ರ.ಸಂ:ಬೆವಿಕಂ/ಪ್ರ.ವ್ಯ(ಆ ಮತ್ತು ಮಾ.ಸಂ.)/ಉಪ್ರವ್ಯ(ಮಾಸಂಅ)/ಬಿಸಿ–40/2025–26/ CYS- 99 ದಿನಾಂಕ: 06.02.2026

## ಶಿಶಿಕ್ಷು ತರಬೇತಿ ಅಧಿಸೂಚನೆ

ಅಪ್ರೆಂಟೀಸ್ ಕಾಯ್ದೆ 1961 ರ ಅಡಿಯಲ್ಲಿ 2025–2026 ನೇ ಸಾಲಿನ ಒಂದು ವರ್ಷ ಅವಧಿಯ ಅಪ್ರೆಂಟೀಸ್ ತರಬೇತಿ ಪಡೆಯಲು ಆನ್‌ಲೈನ್ ಮೂಲಕ ಕರ್ನಾಟಕ ರಾಜ್ಯಕ್ಕೆ ಸೇರಿದ ಅರ್ಹ ಪದವಿಧರ ಹಾಗೂ ಡಿಪ್ಲೋಮಾ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಈ ಕೆಳಗೆ ಕೊಟ್ಟಿರುವಂತೆ **ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದಿಂದ** ಆಹ್ವಾನಿಸಲಾಗಿದೆ.

| **ಕ್ರಮ ಸಂಖ್ಯೆ** | **ಪ್ರವರ್ಗಗಳು** | **ಅಪ್ರೆಂಟೀಸ್ ಸಂಖ್ಯೆಗಳು** | **ಮಾಸಿಕ ಶಿಶಿಕ್ಷು ವೇತನ (ರೂ.)** | **ತರಬೇತಿಯ ಅವಧಿ** |
|---|---|---|---|---|
| 1 | (ಬಿ.ಇ./ಬಿ.ಟೆಕ್ – E&E ಇಂಜಿನಿಯರಿಂಗ್) | 130 | 9,008/– | 01 ವರ್ಷ |
| 2 | (ಬಿ.ಎ/ಬಿ.ಎಸ್ಸಿ/ಬಿಕಾಂ/ಬಿಬಿಎ/ಬಿಸಿಎ/ಬಿಬಿಎಮ್/ ಬಿ.ಇ./ಬಿ.ಟೆಕ್ (E&E ಇಂಜಿನಿಯರಿಂಗ್ ಹೊರತುಪಡಿಸಿ) | 315 | 9,008/– | |
| 3 | ಡಿಪ್ಲೋಮಾ (All branches) | 75 | 8,000/– | |
| | **ಒಟ್ಟು** | **520** | | |

**1. ಅವ್ಯಶಕವಾದ ಅರ್ಹತೆಗಳು:**

- ರಾಜ್ಯ ಸರ್ಕಾರ/ಕೇಂದ್ರ ಸರ್ಕಾರ/ಎ.ಐ.ಸಿ.ಟಿ.ಯು ಯಿಂದ ಮಾನ್ಯತೆ ಪಡೆದು ಕರ್ನಾಟಕ ರಾಜ್ಯದಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯ/ಸಂಸ್ಥೆಯಿಂದ ಪದವಿಯನ್ನು ಪಡೆದಿರಬೇಕು.
- ರಾಜ್ಯ ಸರ್ಕಾರ/ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆದು ಕರ್ನಾಟಕ ರಾಜ್ಯದಲ್ಲಿ ಸ್ಥಾಪಿತವಾದ ಪಾಲಿಟೆಕ್ನಿಕ್ ಕಾಲೇಜು/ ಸಂಸ್ಥೆಯಿಂದ 3 ವರ್ಷದ ಡಿಪ್ಲೋಮಾವನ್ನು ಪಡೆದಿರಬೇಕು.

**2. ಅರ್ಹತಾ ಮಾನದಂಡಗಳು:**

- ಅರ್ಜಿ ಸಲ್ಲಿಸುವ ಅಂತಿಮ ದಿನಾಂಕದ ಮೊದಲು ಅಭ್ಯರ್ಥಿಯು ಪದವಿ/ಡಿಪ್ಲೋಮಾ ಪ್ರಮಾಣಪತ್ರ ಅಥವಾ ಪ್ರಾವಿಷನಲ್ ಪದವಿ/ಡಿಪ್ಲೋಮಾ ಪ್ರಮಾಣಪತ್ರವನ್ನು ಹೊಂದಿರಬೇಕು.
- ಅಭ್ಯರ್ಥಿಯು ಕನಿಷ್ಠ ಉತ್ತೀರ್ಣ ಅಂಕಗಳನ್ನು ಗಳಿಸಿ ಪದವಿ/ಡಿಪ್ಲೋಮಾವನ್ನು ಜನವರಿ–2021 ರ ನಂತರದ ಅವಧಿಯಲ್ಲಿ ಪಡೆದಿರಬೇಕು.

- ಅಪ್ರೆಂಟೀಸ್ ಕಾಯ್ದೆ 1961 ರ ಅಡಿಯಲ್ಲಿ ಈಗಾಗಲೇ ತರಬೇತಿ ಪಡೆದ ಅಥವಾ ಪ್ರಸ್ತುತ ಅಪ್ರೆಂಟೀಸ್ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳು/ ಒಂದು ವರ್ಷದ ಅನುಭವವಿರುವವರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
- ಅಪ್ರೆಂಟೀಸ್ ನಿಯಮದ ಪ್ರಕಾರ ವಯಸ್ಸಿನ ಮಿತಿ ಹದಿನೆಂಟು ವರ್ಷಕ್ಕಿಂತ ಕಡಿಮೆ ಇರಬಾರದು.

**3.** ಅಪ್ರೆಂಟೀಸ್ ಕಾಯ್ದೆಯಡಿಯಲ್ಲಿ ಎಸ್.ಸಿ./ಎಸ್.ಟಿ./ಓ.ಬಿ.ಸಿ ಮೀಸಲಾತಿಗೆ ನೀಡಿರುವ ಮಾರ್ಗಸೂಚಿಗಳಿಗೆ ಅನುಗುಣವಾಗಿ ಮೀಸಲಾತಿಯನ್ನು ನೀಡಲಾಗುವುದು. ಅನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಅಭ್ಯರ್ಥಿಗಳು ನೀಡಿರುವ ಮೀಸಲಾತಿಯನ್ನು ಮಾತ್ರ ಪರಿಗಣಿಸಲಾಗುವುದು. ಅಭ್ಯರ್ಥಿಗಳು ಪರಿಶೀಲನೆ ಸಮಯದಲ್ಲಿ ಮೀಸಲಾತಿಗೆ ಪೂರಕವಾಗಿ ಸಂಬಂಧಿತ ಮೀಸಲಾತಿ ಪ್ರಮಾಣಪತ್ರವನ್ನು ಸಲ್ಲಿಸಬೇಕಾಗುತ್ತದೆ ಓ.ಬಿ.ಸಿ ಪ್ರಮಾಣ ಪತ್ರದ ಬದಲಾಗಿ ಜಾತಿ & ಆದಾಯ ಪ್ರಮಾಣವನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಒಂದು ವೇಳೆ ಸೂಕ್ತ ಪ್ರಮಾಣಪತ್ರವನ್ನು ಸಲ್ಲಿಸಲು ವಿಫಲವಾದಲ್ಲಿ ಅಭ್ಯರ್ಥಿಗಳ ಮೀಸಲಾತಿಯ ಹಕ್ಕನ್ನು ಸಾಮಾನ್ಯ ವರ್ಗವೆಂದು ಪರಿಗಣಿಸಲಾಗುವುದು.

**4. ಕನಿಷ್ಠ ದೈಹಿಕ ಗುಣಮಟ್ಟ:**

ಅಭ್ಯರ್ಥಿಯು ಯಾವುದೇ ಅಂಟುರೋಗ ಅಥವಾ ಸಾಂಕ್ರಾಮಿಕ ಕಾಯಿಲೆಯ ಪುರಾವೆಗಳಿಂದ ಮುಕ್ತನಾಗಿರಬೇಕು. ಅಭ್ಯರ್ಥಿಯು ಸೇವೆಯಿಂದ ಉಲ್ಬಣಗೊಳ್ಳುವ ಅಥವಾ ಸೇವೆಗೆ ಅನರ್ಹರಾಗುವ ಅಥವಾ ಸಾರ್ವಜನಿಕರ ಆರೋಗ್ಯಕ್ಕೆ ಅಪಾಯವನ್ನುಂಟುಮಾಡುವ ಯಾವುದೇ ಕಾಯಿಲೆಯಿಂದ ಬಳಲುತ್ತಿರಬಾರದು. ಅಪ್ರೆಂಟೀಸ್ ಕಾಯ್ದೆಯ ಅನುಸೂಚಿ–2 ರಲ್ಲಿ ನೀಡಿರುವ ಕ್ಷಯರೋಗ ಕಾಯಿಲೆಯ ಸಕ್ರಿಯತೆಯ ಪುರಾವೆಯಿಂದ ಅಥವಾ ಅದರ ಆರೋಗ್ಯ ಸಮಸ್ಯೆಯಿಂದ ಮುಕ್ತನಾಗಿರಬೇಕು. ಸಹಾಯಕ ಶಸ್ತ್ರಚಿಕಿತ್ಸಕ ಶ್ರೇಣಿಯ ಹುದ್ದೆಗೆ ಕೆಳಮಟ್ಟವಲ್ಲದ ವೈದ್ಯಕೀಯ ಅಧಿಕಾರಿಯಿಂದ ಲಿಖಿತರೂಪದಲ್ಲಿ ನೀಡುವ ವೈದ್ಯಕೀಯ ಪ್ರಮಾಣ ಪತ್ರವನ್ನು ಅಭ್ಯರ್ಥಿಯು ಹಾಜರುಪಡಿಸಬೇಕು.

**5. ತರಬೇತಿಯ ಅವಧಿ:**

ಅಪ್ರೆಂಟೀಸ್ ಕಾಯ್ದೆ 1961 ರ ಪ್ರಕಾರ ಅಪ್ರೆಂಟೀಸ್ ತರಬೇತಿಯ ಅವಧಿ ಒಂದು ವರ್ಷದ ಅವಧಿಗೆ ಇರುತ್ತದೆ.

**6. ಆಯ್ಕೆ ವಿಧಾನ:**

ಬೋರ್ಡ್ ಆಫ್ ಅಪ್ರೆಂಟೀಸ್ ಟ್ರೈನಿಂಗ್ (ದಕ್ಷಿಣ ಕ್ಷೇತ್ರೀಯ) ರವರಿಗೆ ಆನ್‌ಲೈನ್ ಅರ್ಜಿಗಳ ದತ್ತಾಂಶದಿಂದ ಅಭ್ಯರ್ಥಿಗಳ ಕಿರುಪಟ್ಟಿಯನ್ನು ತಯಾರಿಸುವ ಕೆಲಸವನ್ನು ವಹಿಸಲಾಗಿದೆ. ಅರ್ಹತಾ ಪರೀಕ್ಷೆಗಳಲ್ಲಿ ಮಾತ್ರ ಪಡೆದ ಅಂಕಗಳ ಆಧಾರದ ಮೇಲೆ ಕಿರುಪಟ್ಟಿಯನ್ನು ತಯಾರಿಸಲಾಗುತ್ತದೆ. ಕಿರುಪಟ್ಟಿ ಆದ ಅಭ್ಯರ್ಥಿಗಳ ವಿವರಗಳನ್ನು ಅವರ ನೋಂದಾಯಿತ ಇ–ಮೇಲ್ ಐಡಿಗೆ ಇ–ಮೇಲ್ ಮೂಲಕ ತಿಳಿಸಲಾಗುತ್ತದೆ. ದಾಖಲಾತಿಗಳ ಪರಿಶೀಲನೆಗೆ **"ಉಪ ಪ್ರಧಾನ ವ್ಯವಸ್ಥಾಪಕರು ರವರ ಕಛೇರಿ., ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ಬೆ.ವಿ.ಕಂ., ಟ್ರೀ ಪಾರ್ಕ್ ಎದುರು, ಬಿಜಿಎಸ್ ವರ್ಲ್ಡ್ ಸ್ಕೂಲ್ ಹಿಂಭಾಗ, ಬಿ.ಎಂ. ರಸ್ತೆ, ರಾಮನಗರ, ಬೆಂಗಳೂರು ದಕ್ಷಿಣ – 562159"** ರವರ ಕಛೇರಿಗೆ ಅಭ್ಯರ್ಥಿಗಳು ಖುದ್ದಾಗಿ ಹಾಜರಾಗಬೇಕು.

7. **ಅರ್ಜಿಗಳನ್ನು ನೋಂದಣಿ ಮಾಡುವ ಮತ್ತು ಸಲ್ಲಿಸುವ ವಿಧಾನ:**

<table>
<tr><th>For students who have already enrolled in the old National Web Portal (www.mhrdnats.gov.in) and having a login detail</th><th>For students who have not so far enrolled in the New National Web Portal</th></tr>
<tr><td>
Part A:<br>
<u>Step 1:</u><br>
a. Go to → https://nats.education.gov.in/<br>
b. Click student<br>
c. Student login<br>
d. Forgot Password<br>
e. Enter registered email id to get activation link & Reset password.<br><br>
<u>Step 2:</u><br>
a. Student login<br>
b. Enter registered email id & new password<br>
c. Complete application form<br>
d. A unique Enrollment number (12 digit) for each student will be generated.<br><br>
After completion the Enrollment<br><br>
<u>Part B:</u><br>
a. Student Login<br>
b. Under “Apply against advertised vacancies” Search “Bangalore Electricity Supply Company Limited”<br>
c. Click apply (You have successfully applied for the vacancy)
</td><td>
<u>Part A:</u><br>
<u>Step 1:</u><br>
a. Go to → https://nats.education.gov.in/<br>
b. Click student<br>
c. Click Student Register → complete Step 1 process<br><br>
<u>Step 2:</u><br>
a. Student login<br>
b. Complete the application form<br>
c. A unique Enrollment number (12 digit) for each student will be generated.<br><br>
After completion the Enrollment<br><br>
<u>Part B:</u><br>
a. Student Login<br>
b. Under “Apply against advertised vacancies” Search “Bangalore Electricity Supply Company Limited”<br>
c. Click apply (You have successfully applied for the vacancy)
</td></tr>
</table>

ವೆಬ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸುವ ಸಂಬಂಧಿತ ಪ್ರಶ್ನೆಗಳಿಗೆ studentquery@boat-srp.com, knplacement@boat-srp.com ಇ–ಮೇಲ್‌ಗೆ ಸಂಪರ್ಕಿಸುವುದು.

**8. ಪ್ರಮುಖ ದಿನಾಂಕಗಳು:**

| ಕ್ರ.ಸಂ. | ಚಟುವಟಿಕೆ | ದಿನಾಂಕ |
|---|---|---|
| 1 | ಆನ್‌ಲೈನ್ ಅಪ್ಲಿಕೇಶನ್ ಪ್ರಾರಂಭ ದಿನಾಂಕ: | **12.02.2026** |
| 2 | **“ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ”** ಗೆ ನ್ಯಾಟ್ಸ್ ಪೋರ್ಟ್‌ಲ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: | **02.03.2026** |
| 3 | ಕಿರುಪಟ್ಟಿಯಾದ ಅಭ್ಯರ್ಥಿಗಳ ಪಟ್ಟಿಯ ಘೋಷಣೆ ದಿನಾಂಕ: | **10.03.2026** |
| 4 | **“ಮಾನವ ಸಂಪನ್ಮೂಲ ಅಭಿವೃದ್ಧಿ. ಕೇಂದ್ರ, ಬೆ.ವಿ.ಕಂ., ಟ್ರೀ ಪಾರ್ಕ್ ಎದುರು, ಬಿಜಿಎಸ್ ವರ್ಲ್ಡ್ ಸ್ಕೂಲ್ ಹಿಂಭಾಗ, ಬಿ.ಎಂ. ರಸ್ತೆ, ರಾಮನಗರ–562159”** ಈ ವಿಳಾಸದಲ್ಲಿ ಕಿರುಪಟ್ಟಿಯಾದ ಅಭ್ಯರ್ಥಿಗಳ ದಾಖಲೆಗಳ ಪರಿಶೀಲನೆ ದಿನಾಂಕ: | **ದಿನಾಂಕ 23.03.2026 ರಿಂದ ದಿನಾಂಕ 25.03.2026 ರ ಈ ದಿನಾಂಕಗಳಲ್ಲಿ ಯಾವುದಾದರೂ ಕೆಲಸದ ದಿನಗಳಲ್ಲಿ (ಸಮಯ ಬೆಳಗ್ಗೆ 11 ಗಂಟೆಯಿಂದ ಸಂಜೆ 4 ಗಂಟೆ ವರೆಗೆ)** |

ಕಿರುಪಟ್ಟಿಯಾದ ಅಭ್ಯರ್ಥಿಗಳ ಪಟ್ಟಿಯನ್ನು NATS ಪೋರ್ಟಲ್ ವೆಬ್‌ಸೈಟ್ https://nats.education.gov.in/index.php ನ ರೀಜನಲ್ ಇವೆಂಟ್ಸ್ ನ BOAT (Southern Region) ಹಾಗೂ ಬೆವಿಕಂ ವೆಬ್‌ಸೈಟ್ https://bescom.karnataka.gov.in ನ Administration & Human Resource/Training ಅಡಿಯಲ್ಲಿ ಪ್ರಕಟಿಸಲಾಗುವುದು. ಕಾಲಕಾಲಕ್ಕೆ ಯಾವುದೇ ನಿಯಮಿತವಾದ ಕಾಲೋಕಿತಗಳಿಗಾಗಿ (Updates) ದಯವಿಟ್ಟು ವೆಬ್‌ಸೈಟ್‌ನ ಈ ವಿಭಾಗಗಳಿಗೆ ಭೇಟಿ ನೀಡಿ.

9. **ಸಾಮಾನ್ಯ ಸೂಚನೆಗಳು:**

- ಅಭ್ಯರ್ಥಿಯು ಕರ್ನಾಟಕ ರಾಜ್ಯಕ್ಕೆ ಸೇರಿದವರಾಗಿರಬೇಕು.
- ಅಭ್ಯರ್ಥಿಗಳು ಕನ್ನಡ ಭಾಷೆಯಲ್ಲಿ ಓದುವ ಮತ್ತು ಬರೆಯುವ ಜ್ಞಾನವನ್ನು ಹೊಂದಿರಬೇಕು.
- **ಪ್ರಯಾಣ ವೆಚ್ಚಗಳು:** ದಾಖಲೆಗಳ ಪರಿಶೀಲನೆಗೆ ಹಾಜರಾಗಲು ಯಾವುದೇ ಪ್ರಯಾಣ ಭತ್ಯೆ/ತುಟ್ಟಿ ಭತ್ಯೆ ಪಾವತಿಸಲಾಗುವುದಿಲ್ಲ.
- **ಭೋಜನ/ವಸತಿ ವ್ಯವಸ್ಥೆ:** ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಯಾವುದೇ ಭೋಜನ ಅಥವಾ ವಸತಿ ವೆಚ್ಚಗಳನ್ನು ನೀಡಲಾಗುವುದಿಲ್ಲ ಮತ್ತು ಆಯ್ಕೆಯಾದ ನಂತರ ಅಭ್ಯರ್ಥಿಗಳು ಸ್ಥಳನಿಯುಕ್ತಿಗೊಳಿಸಿದ ಸ್ಥಳದಲ್ಲಿ ಸ್ವಂತವಾದ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು.
- **ಅಪ್ರೆಂಟೀಸ್ ತರಬೇತಿ ಅವಧಿ ಮುಗಿದ ನಂತರ ಬೆ.ವಿ.ಕಂ. ನಿಂದ ಅಪ್ರೇಂಟಿಸ್ ಅಭ್ಯರ್ಥಿಗಳಿಗೆ ಯಾವುದೇ ಉದ್ಯೋಗ ನೀಡುವುದು ಕಡ್ಡಾಯವಿರುವುದಿಲ್ಲ ಅಥವಾ ಅಪ್ರೆಂಟೀಸ್‌ಶಿಪ್ ಕಾಯ್ದೆ 1961, ಅನುಸೂಚಿ–VI, ನಿಯಮ–6 ಪ್ರಕಾರ ನಿರ್ದಿಷ್ಟಡಿಸಿದಂತೆ ಉದ್ಯೋಗದಾತರುಗಳಿಂದ ನೀಡುವ ಉದ್ಯೋಗವನ್ನು ಅಪ್ರೇಂಟಿಸ್ ಅಭ್ಯರ್ಥಿಗಳು ಸ್ವೀಕರಿಸುವುದು ಕಡ್ಡಾಯವಾಗಿರುವುದಿಲ್ಲ.**
- ನಿಗದಿತ ದಿನಾಂಕದ ಮೊದಲು ಅಥವಾ ನಂತರ ಸ್ವೀಕರಿಸಿದ ಯಾವುದೇ ಅಪೂರ್ಣ/ತಪ್ಪಾದ ಆನ್‌ಲೈನ್ ಅರ್ಜಿಗಳು ಅಥವಾ ನಿಗದಿತ ದಿನಾಂಕದ ನಂತರ ಸ್ವೀಕರಿಸಿದ ಯಾವುದೇ ಅರ್ಜಿಯನ್ನು ತಿರಸ್ಕರಿಸಲಾಗುತ್ತದೆ. ಈ ವಿಷಯದಲ್ಲಿ ಅಭ್ಯರ್ಥಿಗಳಿಗೆ ಯಾವುದೇ ಪತ್ರವ್ಯವಹಾರ ಅಥವಾ ವಿಚಾರಿಸುವುದಕ್ಕೆ ಅವಕಾಶವಿರುವುದಿಲ್ಲ.
- ಬೋರ್ಡ್ ಆಫ್ ಅಪ್ರೆಂಟೀಸ್ ಟ್ರೈನಿಂಗ್ (ದಕ್ಷಿಣ ಕ್ಷೇತ್ರೀಯ) ಗೆ ಆಯ್ಕೆ ಪ್ರಕ್ರಿಯೆಯನ್ನು ಮಾಡಲು ಅಥವಾ ಸಂಪರ್ಕಿಸಲು ಯಾವುದೇ ಇತರೆ ಸಂಸ್ಥೆಗೆ ವಹಿಸಿಕೊಟ್ಟಿರುವುದಿಲ್ಲ/ಅಧಿಕೃತಗೊಳಿಸಿರುವುದಿಲ್ಲ. ಅಭ್ಯರ್ಥಿಗಳಿಗೆ ದಳ್ಳಾಳಿಗಳ ಬಗ್ಗೆ ಎಚ್ಚರವಿರಲು ನಿರ್ದೇಶನ ನೀಡಲಾಗಿದೆ, ಹಾಗೂ ಅಂತಹ ಅನಗತ್ಯ ಘಟನೆಗಳಿಗೆ ಈ ಕಚೇರಿಯನ್ನು ಹೊಣೆಗಾರರನ್ನಾಗಿ ಮಾಡುಲಾಗುವುದಿಲ್ಲ.
- ಯಾವುದೇ ಮೂಲದ ಮೂಲಕ ಒತ್ತಡ ಹೇರುವುದನ್ನು/ಪ್ರಚಾರ ಮಾಡುವವರ ಉಮೇದುವಾರಿಕೆಯನ್ನು ಅನರ್ಹಗೊಳಿಸಲಾಗುವುದು.
- ಅಭ್ಯರ್ಥಿಗಳ ಅರ್ಹತೆಗೆ ಸಂಬಂಧಿಸಿದ ವಿಷಯಗಳಲ್ಲಿ ಬೆ.ವಿ.ಕಂನ ನಿರ್ಧಾರವು ಅಂತಿಮ ಮತ್ತು ಬದ್ಧವಾಗಿರುತ್ತದೆ.
- ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಗಳಲ್ಲಿ ಭವಿಷ್ಯದ ಸಂವಹನಕ್ಕಾಗಿ ಮಾನ್ಯವಾದ ಈ–ಮೇಲ್ ಐಡಿ ಮತ್ತು ಮೊಬೈಲ್ ಸಂಖ್ಯೆ/ಟೆಲಿಫೋನ್ ಸಂಖ್ಯೆಯನ್ನು ಒದಗಿಸಬೇಕು.
- ಮೂಲದಾಖಲಿಗಳು/ ಪ್ರಶಂಸಾಪತ್ರಗಳು/ ಪ್ರಮಾಣಪತ್ರಗಳು/ ದಾಖಲೆಗಳು ಇತ್ಯಾದಿಗಳನ್ನು ದಾಖಲೆಗಳ ಪರಿಶೀಲನೆಗಾಗಿ ಕರೆದಾಗ ಮಾತ್ರ ಒದಗಿಸಬೇಕು.

- <u>ಯಾವುದೇ ಹಂತದಲ್ಲಿ ಅಪ್ರೆಂಟೀಸ್ ಅಧಿಸೂಚನೆಯನ್ನು ರದ್ದುಗೊಳಿಸುವ ಮತ್ತು ಅಗತ್ಯವಿದ್ದಲ್ಲಿ ಹೊಸ ಅಧಿಸೂಚನೆಯನ್ನು ನೀಡುವುದನ್ನು ಪೂರ್ವಾಗ್ರಹವಿಲ್ಲದೆ ಕಂಪನಿಯು ಕಾಯ್ದಿರಿಸಿದೆ.</u>

**ಯಾವುದೇ ಸ್ಪಷ್ಟೀಕರಣಕ್ಕೆ ಅಭ್ಯರ್ಥಿಗಳು ಇ–ಮೇಲ್ ಮೂಲಕ ಸಂಪರ್ಕಿಸಬಹುದು:**

| | |
|---|---|
| knplacement@boat-srp.com | dgmhrd.work@gmail.com |
| ದೂರವಾಣಿ ಸಂಖ್ಯೆ.:044-22542235 | ದೂರವಾಣಿ ಸಂಖ್ಯೆ :080-22356756 |

**ಸಹಿ/–**
**ತರಬೇತಿ ನಿರ್ದೇಶಕರು,**
**ಬೋರ್ಡ್ ಆಫ್ ಅಪ್ರೆಂಟೀಸ್ ಟ್ರೈನಿಂಗ್ (ದಕ್ಷಿಣ ಕ್ಷೇತ್ರೀಯ),**
**ತಾರಮಣಿ, ಚೆನ್ನೈ–600113.**

**ಸಹಿ/–**
**ಪ್ರಧಾನ ವ್ಯವಸ್ಥಾಪಕರು (ಆ& ಮಾ.ಸಂ),**
**ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಲಿಮಿಟೆಡ್,**
**ಕೆ.ಆರ್. ವೃತ್ತ, ಬೆಂಗಳೂರು–560001.**